**ಮಾನ್ಯ ವಿಧಾನಪರಿಷತ್ತು ಸದಸ್ಯರಾದ ಶ್ರೀ ಟಿ.ಎನ್.ಜವರಾಯಿಗೌಡ, ಇವರು ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಸಚಿವರ ಹೇಳಿಕೆ :**

**ವಿಷಯ:** ರಾಜಧಾನಿ ಬೆಂಗಳೂರಿನ ಸಂಚಾರ ದಟ್ಟಣೆ ತಗ್ಗಿಸುವ ಸಲುವಾಗಿ ಉಪನಗರ ರೈಲು ಯೋಜನೆಯನ್ನು ಯಾವಾಗ ಪ್ರಾರಂಭ ಮಾಡಲಾಗಿದೆ ಮತ್ತು ಈ ಯೋಜನೆಯು ಎಷ್ಟು ಕಾರಿಡಾರ್ ಒಳಗೊಂಡ ಸಬ್ ಅರ್ಬನ್ ಯೋಜನೆಯಾಗಿದೆ ಹಾಗೂ ಹಾಲಿ ನಡೆಯುತ್ತಿರುವ ಕಾಮಗಾರಿಗಳು ಯಾವ ಯಾವ ಹಂತದಲ್ಲಿ ಪ್ರಗತಿಯಲ್ಲಿವೆ ಎಂಬುದರ ಬಗ್ಗೆ ವಿವರವಾದ ಮಾಹಿತಿ ನೀಡುವುದು. ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಭರಿಸುತ್ತಿರುವ ಶೇಕಡಾವಾರು ಮೊತ್ತದ ವಿವರವಾದ ಮಾಹಿತಿಯನ್ನು ಒದಗಿಸುವುದು. ಸದ್ಯದಲ್ಲಿ ಯಾವ ಕಾರಿಡಾರ್ ಯೋಜನೆಯನ್ನು ಪೂರ್ಣಗೊಳಿಸಿ ಸಾರ್ವಜನಿಕ ಪ್ರಯಾಣಕ್ಕೆ ಯಾವಾಗ ಅರ್ಪಿಸಲಾಗುವುದು ಎಂಬ ಬಗ್ಗೆ ಸರ್ಕಾರ ಸ್ಪಷ್ಟಪಡಿಸುವುದು. ಈ ಉಪನಗರ ರೈಲ್ವೆ ಯೋಜನೆಯನ್ನು ಬೆಂಗಳೂರು ಸುತ್ತಮುತ್ತಲಿನ ವರ್ತುಲ ರೈಲ್ವೆ ಹಳಿಗೆ ಸಂಪರ್ಕ ಕಲ್ಪಿಸುವ ಯೋಜನೆ ಹಾಕಿಕೊಳ್ಳಲಾಗಿದೆಯೇ ಎಂಬುದರ ಕುರಿತು ಮಾಹಿತಿ ಒದಗಿಸುವುದು. ಹಾಗೆಯೇ ಬೆಂಗಳೂರಿಗೆ ಹತ್ತಿರವಿರುವ ತುಮಕೂರು, ಮಾಗಡಿ, ಗೌರಿಬಿದನೂರು, ಕೋಲಾರ ಮತ್ತಿತರ ನಗರಗಳಿಗೆ ಈ ಉಪನಗರ ರೈಲ್ವೆ ಯೋಜನೆಯನ್ನು ವಿಸ್ತರಣೆ ಮಾಡುವುದು ಸೇರಿದಂತೆ ಈ ಮೇಲಿನ ಎಲ್ಲಾ ಅಂಶಗಳಿಗೆ ಉತ್ತರ ನೀಡಬೇಕೆಂದು ಈ ಶೂನ್ಯ ವೇಳೆಯಲ್ಲಿ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

**ಉತ್ತರ:** ಬೆಂಗಳೂರು ಉಪನಗರ ರೈಲ್ವೆ ಯೋಜನೆಯನ್ನು ದಿನಾಂಕ:20.06.2022 ರಂದು ಭಾರತದ ಗೌರವಾನ್ವಿತ ಪ್ರಧಾನ ಮಂತ್ರಿಗಳು ಶಂಕುಸ್ಥಾಪನೆ ನೆರವೇರಿಸಿದರು. ಈ ಯೋಜನೆಯು ಒಟ್ಟು 58 ನಿಲ್ದಾಣಗಳು ಮತ್ತು ಎರಡು ನಿರ್ವಹಣಾ ಡಿಪೋಗಳೊಂದಿಗೆ ಒಟ್ಟು 148.17 ಕಿ.ಮೀ ಉದ್ದದ 4 ಕಾರಿಡಾರ್‌ಗಳನ್ನು ಹೊಂದಿರುತ್ತದೆ.

| **ಕಾರಿಡಾರ್** | **ವಿಭಾಗ** | **ಉದ್ದ (ಕಿ.ಮೀಗಳಲ್ಲಿ)** |
|---|---|---|
| 1 | ಬೆಂಗಳೂರು - ದೇವನಹಳ್ಳಿ + ಏರ್ ಪೋರ್ಟ್ ಸಂಪರ್ಕ | 41.40 |
| 2 | ಬೈಯಪ್ಪನಹಳ್ಳಿ - ಚಿಕ್ಕಬಾಣವಾರ | 25.01 |
| 3 | ಕೆಂಗೇರಿ – ವೈಟ್ ಫೀಲ್ಡ್ | 35.52 |
| 4 | ಹೀಲಲಿಗೆ - ರಾಜಾನುಕುಂಟೆ | 46.24 |
| | **ಒಟ್ಟು** | **148.17** |

**ಯೋಜನೆಯ ಪ್ರಗತಿ ವಿವರಗಳು:**

(ಎ) ಕಾರಿಡಾರ್ 2 & 4: ಸಿವಿಲ್ ಕೆಲಸಗಳಿಗೆ ಟೆಂಡರ್ ನೀಡಲಾಗಿದೆ. ಈ ಕಾರಿಡಾರ್‌ನಲ್ಲಿ ಕೆಲಸಗಳು ಉತ್ತಮವಾಗಿ ಪ್ರಗತಿಯಲ್ಲಿವೆ. ಪ್ರಗತಿ: ಕ್ರಮವಾಗಿ 32% & 12% ಗಳಿರುತ್ತದೆ.

ಕ್ರಮವಾಗಿ ಕಾರಿಡಾರ್-2ರ 8 ನಿಲ್ದಾಣಗಳು ಮತ್ತು ಕಾರಿಡಾರ್-4ರ 9 ನಿಲ್ದಾಣಗಳಿಗೆ ಟೆಂಡರ್‌ಗಳನ್ನು ನೀಡಲಾಗಿದೆ.

(ಬಿ) ಕಾರಿಡಾರ್-1 (41.40 ಕಿ.ಮೀ): ಬೆಂಗಳೂರು ನಗರದಿಂದ ದೇವನಹಳ್ಳಿ ಮತ್ತು ಏರ್‌ಪೋರ್ಟ್ ನಿಲ್ದಾಣ): ಜೋಡಣೆ ಯೋಜನೆಯು ರೈಲ್ವೆಯ ಅನುಮೋದನೆಯ ಹಂತದಲ್ಲಿದೆ. ಬೆಂಗಳೂರು

ನಗರದಿಂದ ಯಲಹಂಕವರೆಗಿನ ಸಿವಿಲ್ ಕಾಮಗಾರಿಗಳ ಟೆಂಡರ್ ಅಂತಿಮ ಹಂತದಲ್ಲಿದೆ ಮತ್ತು ಏಪ್ರಿಲ್-25ಕ್ಕೆ ನೀಡಲಾಗುವ ನಿರೀಕ್ಷೆಯಿದೆ.

(ಸಿ) ಸಿಗ್ನಲಿಂಗ್ ಮತ್ತು ಟೆಲಿಕಾಂ, ಟ್ರಾಕ್ಷನ್, ವಿದ್ಯುತ್ ಸರಬರಾಜು, ಡಿಪೋಗಳು, ಹಳಿಗಳಂತಹ (Traction Lilnking) ಸಿಸ್ಟಮ್ ಟೆಂಡರ್‌ಗಳನ್ನು ಸಹ ಆಹ್ವಾನಿಸಲಾಗಿದೆ. ಪ್ರಸ್ತುತವಾಗಿ ಟೆಂಡರ್‌ಗಳು ಮೌಲ್ಯಮಾಪನ ಹಂತದಲ್ಲಿದೆ.

ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರವು 20:20 ಅನುಪಾತದಲ್ಲಿ ವೆಚ್ಚವನ್ನು ಹಂಚಿಕೊಳ್ಳಲಾಗುತ್ತದೆ ಮತ್ತು ಉಳಿದ ಶೇ 60% ಅನ್ನು ಬಾಹ್ಯ ಸಾಲದ ಮೂಲಕ ಭರಿಸಲಾಗುತ್ತದೆ.

ಕಾರಿಡಾರ್-2 ಮತ್ತು 4 ಡಿಸೆಂಬರ್-26 ರೊಳಗೆ ಸಾರ್ವಜನಿಕ ಸೇವೆಗೆ ಅರ್ಪಿಸಲು ವೇಳಾಪಟ್ಟಿಯ ಪ್ರಕಾರ ಯೋಜನೆಯನ್ನು ಪೂರ್ಣಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ವರ್ತುಲ ರೈಲ್ವೆ ಯೋಜನೆಗೆ ಉಪನಗರ ರೈಲನ್ನು ಸಂಪರ್ಕಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ,

ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಉಪನಗರಗಳಿಗೆ ವಿಸ್ತರಿಸುವುದು.(ಹಂತ II)

- ದಿನಾಂಕ 06.06.2023ರಂದು ನಡೆದ ಸಭೆಯಲ್ಲಿ ಪಕ್ಕದ ಉಪನಗರಗಳಿಂದ ಪ್ರಯಾಣಿಸುವ ಪ್ರಯಾಣಿಕರಿಗೆ ಉತ್ತಮ ಸಂಪರ್ಕವನ್ನು ಒದಗಿಸಲು ಬಿಎಸ್‌ಆರ್‌ಪಿಯನ್ನು ಚಿಕ್ಕಬಳ್ಳಾಪುರ, ಮೈಸೂರು, ಕೋಲಾರ, ಗೌರಿಬಿದನೂರು, ಹೊಸೂರು, ತುಮಕೂರು, ಬಂಗಾರಪೇಟೆ ಮತ್ತು ಮಾಗಡಿಗೆ ವಿಸ್ತರಿಸಲು ಸೂಚನೆ ನೀಡಲಾಗಿದೆ. ಉಪನಗರ ರೈಲನ್ನು ಎರಡನೇ ಹಂತದಲ್ಲಿ ಎಸ್ ಡಬ್ಲ್ಯೂಆರ್ ಯೋಜಿಸಿರುವ ವೃತ್ತಾಕಾರದ ರೈಲು ಮಾರ್ಗದವರೆಗೆ 146 ಕಿ.ಮೀ.ಗೆ ವಿಸ್ತರಿಸಲು ಪ್ರಸ್ತಾಪಿಸಲಾಗಿದೆ.
- "ರಾಷ್ಟ್ರೀಯ ಉಪನಗರ ರೈಲು ನೀತಿ, 2018" ರ ಪ್ರಕಾರ, ಉಪನಗರ ಯೋಜನೆಗಳಿಗೆ ಕಾರ್ಯಸಾಧ್ಯತಾ ಅಧ್ಯಯನಗಳನ್ನು ಸಾಮಾನ್ಯವಾಗಿ ರಾಜ್ಯ ಸರ್ಕಾರದ ಕೋರಿಕೆಯ ಮೇರೆಗೆ ಭಾರತೀಯ ರೈಲ್ವೆ ನಡೆಸುತ್ತದೆ. ಇದರ ವೆಚ್ಚವನ್ನು 50:50 ಅನುಪಾತದಲ್ಲಿ ಹಂಚಿಕೊಳ್ಳಲಾಗುತ್ತದೆ.
- ದಿನಾಂಕ:26.06.2023 ರಂದು, ಕೆ-ರೈಡ್ ಮಂಡಳಿಯು ಬಿಎಸ್‌ಆರ್‌ಪಿ ಹಂತ-2 ರ ಅಡಿಯಲ್ಲಿ ಉಪನಗರಗಳಿಗೆ ಬಿಎಸ್‌ಆರ್‌ಪಿ ವಿಸ್ತರಣೆಗಾಗಿ ಪೂರ್ವ-ಕಾರ್ಯಸಾಧ್ಯತಾ ಅಧ್ಯಯನವನ್ನು ಕೈಗೊಳ್ಳಲು ಒಪ್ಪಿಗೆ ಸೂಚಿಸುತ್ತಾ, ರೈಲ್ವೆ ಮಂಡಳಿಯ ಪೂರ್ವಾನುಮೋದನೆಯನ್ನು ಪಡೆಯಲು ಸೂಚಿಸಿರುತ್ತದೆ.
- ವರ್ತುಲ ರೈಲ್ವೆಗೆ ಉಪನಗರ ರೈಲ್ವೆ ಯೋಜನೆಯನ್ನು ಜೋಡಿಸಲು ಪೂರ್ವಸಾಧ್ಯತಾ ಅಧ್ಯಯನಕ್ಕಾಗಿ (Pre-feasibillity study) ರೈಲ್ವೆ ಸಚಿವಾಲಯಕ್ಕೆ ಸಲ್ಲಿಸಲಾಗಿದೆ.

**(ಎಂ.ಬಿ.ಪಾಟೀಲ)**
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು